**<u>1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.</u>**

**<u>ಸಿ.ಸಿ. ಸಂಖ್ಯೆ:527/2020</u>**

| | |
|---|---|
| ಫ್ರಾಸಾ : | 02 |
| ಚಾಸಾ : | 02 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 25.06.2026.**

| | | |
|---|---|---|
| ಸಾಕ್ಷಿಯ ಹೆಸರು | : | ಸಿದ್ದಪ್ಪ |
| ತಂದೆಯ ಹೆಸರು | : | ಚೌಡಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಕೃಷಿ |
| ವಾಸಸ್ಥಳ | : | ಬಾಸೂರು |

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ</u>**

ಸಾಕ್ಷಿಯು ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ, ನನ್ನ ಸಮಕ್ಷಮ ಪೋಲಿಸರು ಯಾವುದೆ ಪಂಚನಾಮೆಗಳನ್ನು ನಡೆಸಿರುವುದಿಲ್ಲ. ಯಾವುದೆ ಫೋಟೋ ತೆಗೆದಿರುವುದಿಲ್ಲ. ಯಾವುದೆ ಗೊಬ್ಬರವನ್ನು ಬಾಟಲ್ ನಲ್ಲಿ ಅಮಾನತುಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ನಿಪಿ–2 ರಂತೆ ಕೃತ್ಯ ನಡೆದ ಸ್ಥಳ ಪಂಚನಾಮೆ ಮತ್ತು ನಿಪಿ–3 ರಂತೆ ಅಮಾನತು ಪಂಚನಾಮೆಯನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಾಕ್ಷಿಯ ಸಹಿಗಳನ್ನುನ್ನು **ನಿಪಿ–2(ಬಿ) ಮತ್ತು 3(ಬಿ)** ಎಂದು ಗುರುತಿಸಲಾಯಿತು.

ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು.)**

**ಪಾಟೀ ಸವಾಲು : ಸ.ಸ.ಅ. ರವರಿಂದ**

ದಿಃ 04.02.2019 ರಂದು ಬೆಳಗ್ಗೆ 11.15 ರಿಂದ 12.00 ಗಂಟೆ ಸಮಯದವರೆಗೆ ಈ ಪ್ರಕರಣದ ಸಂಬಂಧ ಪೋಲಿಸರು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಸ್ಥಳದಲ್ಲಿ ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಸಗಣಿ ಗೊಬ್ಬರವನ್ನು ಪರೀಕ್ಷೆಗಾಗಿ ಕಳುಹಿಸಲು ಪಿ ಎಂಬ ಆಂಗ್ಲ ಭಾಷೆ ಅಕ್ಷರದಿಂದ ಸೀಲು ಮಾಡಿ ಅದನ್ನು ವಶಕ್ಕೆ ಪಡೆದರು ಮತ್ತು ಆ ಸಮಯದಲ್ಲಿ ಫೋಟೋ ತೆಗೆದರು ಎಂದರೆ ಸರಿಯಲ್ಲ. ಅಲ್ಲದೆ ಅದೇ ದಿನ ಮಧ್ಯಾಹ್ನ 12.15 ಸಮಯದಿಂದ 13.00 ಸಮಯದವರೆಗೆ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಪೋಲಿಸರು ಅಮಾನತು ಪಂಚನಾಮೆ ಜರುಗಿಸಿ, ಸ್ಥಳದಿಂದ ಗೊಬ್ಬರವನ್ನು ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಪಡೆದು ಅದನ್ನು ಪಿ ಎಂಬ ಅಕ್ಷರದಿಂದ

ಮೊಹರು ಮಾಡಿ ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಸಿ.ಬಿ. ವಕೀಲರಿಂದ, ಆರೋಪಿತರ ಪರವಾಗಿ**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.